ಅ) ಹುಬ್ಬಳ್ಳಿ ಗ್ರಾಮೀಣ ಕ್ಷೇತ್ರದ ಸುಳ್ಳಿ ಗ್ರಾಮದ ಪುರಾತನವಾದ ಶ್ರೀ ಕೈಲೇಶ್ವರ ದೇವಸ್ಥಾನದ ಗರ್ಭಗುಡಿಯು ಇತ್ತೀಚಿಗೆ ಕುಸಿದು ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಗರ್ಭಗುಡಿಯ ಜೀರ್ಣೋದ್ಧಾರಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಿ.ಮುನಿಯಪ್ಪ (ಮುಜರಾಯಿ ಸಚಿವರು):

ಅ) ಇಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ: ಅಂಬೇಡ್ಕರ್ ವಸತಿ ಯೋಜನೆ ಮನೆಗಳ ಮಂಜೂರಾತಿ

113 (1569)

ಶ್ರೀ ಇ.ಮಾರುತಿರಾವ್ ಪವಾರ್ (ನರಸಿಂಹರಾಜ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರವು ಅಂಬೇಡ್ಕರ್ ವಸತಿ ಯೋಜನೆಯಡಿಯಲ್ಲಿ 60,000 ಮನೆಗಳ ನಿರ್ಮಾಣ ಕಾರ್ಯ ಉಳಿಕೆಯಾಗಿದ್ದು ಇವುಗಳನ್ನು 1998-99ನೇ ಸಾಲಿನಲ್ಲಿ ಪೂರ್ಣಗೊಳಿಸುವ (ಸರ್ಕಾರವು ಇದಕ್ಕಾಗಿ 49.80 ರೂ.ಗಳನ್ನು ಒದಗಿಸಲಾಗಿದ್ದು) ಉದ್ದೇಶವಿದೆಯೇ?

ಆ) ಮೈಸೂರಿನ ನರಸಿಂಹರಾಜ ಕ್ಷೇತ್ರಕ್ಕೆ ಅಂಬೇಡ್ಕರ್ ವಸತಿ ಯೋಜನೆಯಡಿಯಲ್ಲಿ ಎಷ್ಟು ಮನೆಗಳನ್ನು ಮಂಜೂರು ಮಾಡಲಾಗಿದೆ; ಹಾಗೂ- ಈ ಮನೆಗಳನ್ನು ಪೂರ್ಣಗೊಳಿಸಿ ಅಲ್ಲಿಯೇ ಫಲಾನುಭವಿಗಳಿಗೆ ಯಾವಾಗ ವಿತರಿಸಲಾಗುವುದು?

ಶ್ರೀ ಹೆಚ್.ಡಿ.ರೇವಣ್ಣ (ವಸತಿ ಸಚಿವರು):

ಅ) ಹೌದು.

ಆ) ಮೈಸೂರು ನಗರಕ್ಕೆ ಸಂಬಂಧಪಟ್ಟಂತೆ 93-94, 96-97 ಮತ್ತು 97-98ನೇ ಸಾಲಿನಲ್ಲಿ ಒಟ್ಟು 811 ಮನೆಗಳ ಗುರಿಯನ್ನು ನಿಗಧಿಪಡಿಸಲಾಗಿದೆ. ನರಸಿಂಹರಾಜ ಕ್ಷೇತ್ರಕ್ಕೆ ಸಂಬಂಧಿಸಿದಂತೆ 93-94ನೇ ಸಾಲಿನಲ್ಲಿ 58 ಮನೆಗಳ ಗುರಿಯನ್ನು ನಿಗದಿಪಡಿಸಿದ್ದು, ಈ ಮನೆಗಳು ಪೂರ್ಣಗೊಂಡಿರುತ್ತವೆ. 96-97ನೇ ಸಾಲಿಗೆ

ಸಂಬಂಧಿಸಿದಂತೆ. ಮೈಸೂರು ನಗರಪಾಲಿಕೆಯವರು ಅರ್ಜಿಗಳನ್ನು ಆಹ್ವಾನಿಸಿದ್ದು, ಇದುವರೆಗೂ 82 ಅರ್ಜಿಗಳು ಮಾತ್ರ ಬಂದಿರುತ್ತವೆ. 97-98ನೇ ಸಾಲಿಗೆ ವಸತಿ ಸಮಿತಿ ಸಭೆಯು ನಡೆಯದೇ ಇರುವುದರಿಂದ ಕ್ಷೇತ್ರವಾರು ವಿಂಗಡಣೆ ಮತ್ತು ಫಲಾನುಭವಿಗಳ ಆಯ್ಕೆ ಆಗಿರುವುದಿಲ್ಲ. ಈ ಬಗ್ಗೆ ಜರೂರು ಕ್ರಮ ಕೈಗೊಂಡು ಫಲಾನುಭವಿಗಳ ಆಯ್ಕೆಯನ್ನು ಮಾಡಿ ಮನೆಗಳ ಕೆಲಸವನ್ನು ಪೂರ್ಣಗೊಳಿಸಲು ಮೈಸೂರು ನಗರಪಾಲಿಕೆಗೆ ನಿರ್ದೇಶನ ನೀಡಲಾಗುವುದು.

ವಿಷಯ: ಕೊಡಗು ಜಿಲ್ಲೆಯಲ್ಲಿ ದೇವಾಲಯಗಳ ಆಸ್ತಿ-ಪಾಸ್ತಿ

1135 (1593)

ಶ್ರೀ ಡಿ.ಎಸ್.ಮಾದಪ್ಪ (ಮಡಿಕೇರಿ): ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ ಮುಜರಾಯಿ ಇಲಾಖೆಯ ವ್ಯಾಪ್ತಿಗೊಳಪಟ್ಟ ದೇವಾಲಯಗಳೆಷ್ಟು?

ಆ) ದೇವಾಲಯಕ್ಕೆ ಸೇರಿದ ಆಸ್ತಿ-ಪಾಸ್ತಿಗಳ ವಿವರವೆಷ್ಟು; ಮತ್ತು ದೇವಾಲಯದ ಜೀರ್ಣೋದ್ಧಾರಕ್ಕಾಗಿ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಇ) ದೇವಾಲಯದ ಅರ್ಚಕರು ಮತ್ತು ನೌಕರ ವರ್ಗದವರಿಗೆ ಸರ್ಕಾರ ವೇತನವನ್ನು ನಿಗಧಿಪಡಿಸಿದೆಯೇ?

ಶ್ರೀ ಬಿ.ಮುನಿಯಪ್ಪ (ಮುಜರಾಯಿ ಸಚಿವರು):

ಅ) 6 ದೇವಾಲಯಗಳು.

ಆ) ದೇವಸ್ಥಾನಗಳ ಆಸ್ತಿ ವಿವರ ಈ ಕೆಳಕಂಡಂತಿದೆ.

	ದೇವಸ್ಥಾನದ ಹೆಸರು	ಎಕರೆ ಸೆಂಟ್ಸ್
1	ಶ್ರೀ ಓಂಕಾರೇಶ್ವರ ದೇ:	115-88
2	ಶ್ರೀ ಪಾಲೂರು ದೇ:	31-50
3	ಶ್ರೀ ಕಕ್ಕಬ್ಬೆ ದೇ:	31-26
4	ಶ್ರೀ ಇರ್ಪು ದೇ:	25-11
5	ಶ್ರೀ ಭಾಗಮಂಡಲ ದೇ:	46-33